**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 653/2021**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ಅಂಥೋಣಿ ಅಲೆಕ್ಸ್ ಬಿನ್ ಅಂಥೋಣಿ ದಾಸ್, 37 ವರ್ಷ, ದ್ವಿತೀಯ ದರ್ಜೆ ಸಹಾಯಕರು, ತಾಲ್ಲೂಕು ಕಚೇರಿ , ಭದ್ರಾವತಿ, ವಾಸಃ1 ನೇ ಕ್ರಾಸ್, ಎ ಆರ್ ಬಿ ಕಾಲೋನಿ, ಶಿವಮೊಗ್ಗ ನಗರ

-ಃಆಪಾದನೆಃ-

ದಿನಾಂಕಃ 19.11.2019 ರಂದು ರಾತ್ರಿ 9-45 ರ ಸಮಯದಲ್ಲಿ ತರೀಕೆರೆ ಪೊಲೀಸ್ ಠಾಣಾ ಸರಹದ್ದಿನ ಕಟ್ಟೆಹೊಳೆ ಗ್ರಾಮದ ಲಕ್ಕವಳ್ಳಿ ಕ್ರಾಸ್ ಹತ್ತಿರ ಹಾದು ಹೋಗಿರುವ ಎನ್ ಹೆಚ್ 206 ರಸ್ತೆಯ ಎಡಬದಿಯಲ್ಲಿ ಚಾಸಾ-1 ರವರು ತನ್ನ ಬಾಬ್ತು ಕೆಎ-18/ಬಿ-3176 ನೇ ಟಾಟಾ ಎಸ್ ಗೂಡ್ಸ್ ವಾಹನವನ್ನು ಚಾಲನೆ ಮಾಡಿಕೊಂಡು ತರೀಕೆರೆ ಕಡೆಗೆ ಬರುತ್ತಿರುವಾಗ ಅದೇ ಸಮಯಕ್ಕೆ ಎದುರುಗಡೆ ತರೀಕೆರೆ ಕಡೆಯಿಂದ ಕೆಎ-17/ಇಜಿ-3436 ನೇ ಮೋಟಾರ್ ಬೈಕಿನ ಚಾಲಕನಾದ ಚಾಸಾ-5 ರವರು ಬರುತ್ತಿರುವಾಗ ಅವರ ಹಿಂದೆ ಬರುತ್ತಿದ್ದ ಆರೋಪಿಯಾದ ನೀವು ಕೆಎ-51/ಎಂ ಹೆಚ್ -6559 ನೇ ಹುಂಡೈ ಇಯಾನ್ ಕಾರನ್ನು ಅತಿವೇಗ, ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ-5 ರವರ ಬೈಕಿಗೆ ಡಿಕ್ಕಿಪಡಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ **279** ರೀತ್ಯಾ ಶಿಕ್ಷಾರ್ಹ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿ ಅಪಘಾತಪಡಿಸಿದ ಪರಿಣಾಮ ಚಾಸಾ-1 ರವರ ಬಲಗಾಲಿನ ಮಂಡಿಯ ಹತ್ತಿರ ಪೆಟ್ಟಾಗಿ ಸಾಮಾನ್ಯ ಸ್ವರೂಪದ ರಕ್ತಗಾಯವಾಗಿದ್ದು ಹಾಗೂ ಚಾಸಾ-5 ರವರ ಹಣೆಗೆ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ

ರಕ್ತಗಾಯ ಮತ್ತು ತಲೆಗೆ ಬಲವಾದ ಪೆಟ್ಟು ಬಿದ್ದು ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**337, 338** ರ ರೀತ್ಯಾ ಶಿಕ್ಷಾರ್ಹ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಪ್ರಶ್ನೆ-1 ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಗಳು ತಿಳಿಯಿತೆ?
ಉತ್ತರಃ

ಪ್ರಶ್ನೆ-2ಃ ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿ ವಿವರಿಸಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ.)
ದಿನಾಂಕಃ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ತರೀಕೆರೆ.

ಆರೋಪಿ/ತರ ಸಹಿಃ